

ತುಂಬುವ ಪ್ರೇರಕ ವಾಸನೆಗಳಲ್ಲಿ ಅದೂ ಒಂದು ಎಂದು ನನಗೆ ತುಂಬಾ ಸಲ ಅನಿಸಿದ್ದಿದೆ.

ನಾವು ಕೂತ ಅದೆಷ್ಟೋ ಹೊತ್ತಿಗೆ ಎಲ್ಲರನ್ನೂ ತುಂಬಿಸಿಕೊಂಡು, ಹಲವರನ್ನು ನಿಲ್ಲಿಸಿಕೊಂಡು, ಅದರೊಳಗಿಂದಲೇ ತೂರಿಕೊಂಡು ಕಂಡಕ್ಟರ್ ಪ್ರತ್ಯಕ್ಷನಾಗುತ್ತಿದ್ದ. ಅವನು ಎಲ್ಲರ ಬಳಿ ಸಾಗಿ ಅವರು ಹೋಗುವ ಊರು ಕೇಳಿ, ಅದಕ್ಕೆ ತಕ್ಕಂತೆ ನಿಗದಿಪಡಿಸಿದ ದುಡ್ಡಿಸಿದುಕೊಂಡು, ನಿಖರವಾಗಿ ನೆನಪಿಟ್ಟುಕೊಳ್ಳುತ್ತಿದ್ದ ಅವನ ನೆನಪಿನ ಶಕ್ತಿಗೆ ನಾನು ದಂಗಾಗುತ್ತಿದ್ದೆ. ಖಾಸಗಿ ಬಸ್ಸಾದ್ದರಿಂದ ಟಿಕೇಟು ಕೊಡುವ ಯಾವ ಸಂಪ್ರದಾಯವೂ ಆ ಕಾಲದಲ್ಲಿ ಇರಲಿಲ್ಲ. ಈಗ ಯೋಚಿಸಿದರೆ ಇದೊಂದು ನಮೂನಿಯ ಯಾವುದೇ ಬಾಂಡ್ ಪೇಪರುಗಳ ಹಂಗಿಲ್ಲದೆ ಬರಿಯ ನಂಬಿಕೆಯ ಮೇಲೆ ಕೊಟ್ಟು ತೆಗೆದುಕೊಳ್ಳುತ್ತಿದ್ದ ಕೈಗಡ ಸಾಲದ ದಿವ್ಯಪರಂಪರೆಯಂತೆ ನನಗೆ ಕಾಣುತ್ತದೆ. ನಾಲಿಗೆಯ ಮೇಲೆ ನಂಬಿಕೆ ಇಡುವ ಕಾಲವೂ ಅದಾಗಿತ್ತಿರಬೇಕು!

ಕಂಡಕ್ಟರ್ ತನ್ನೆಲ್ಲ ಕರ್ತವ್ಯ ಸಂಭ್ರಮಗಳನ್ನು ಮುಗಿಸಿ 'ರೈಯ..ರೈಯಾsss' ಎಂಬ ಉತ್ಸಾಹದ ಕಹಳೆ ಊದಿದಾಗ ಬಸ್ಸು ಮೈಕೊಡವಿ ಮೆಲ್ಲಗೆ ತುಳುಕುತ್ತಾ ಬಳುಕುತ್ತಾ ಸಾಗಲು ಶುರುಹಚ್ಚಿಕೊಳ್ಳುತ್ತಿತ್ತು. ಆಗ ಬಸ್ಸು ನಾವಿರುವ ಯಾವುದೋ ಜಾಗದಿಂದ ನಾವು ಕೇಳಿ ಮಾತ್ರ ತಿಳಿದಿರುವ ಮತ್ಯಾವುದೋ ಜಾಗಕ್ಕೆ ಕರೆದೊಯ್ಯುವ ಮಾಯಾ ವಾಹನದಂತೆ ನನಗೆ ಕಾಣಿಸುತ್ತಿತ್ತು. ಆಗಿನಿಂದ ಈಗಿನವರೆಗೂ ಬಸ್ಸಿನ ಕುರಿತಾದ ನನ್ನ ಬೆರಗು ಮಾಸಿಲ್ಲವೆಂದರೆ ಅದೇ ಸರಿಯಾದ ಮಾತು! ಬಾಲ್ಯದಲ್ಲಿ ವರ್ಷಕ್ಕೆ ಅಬ್ಬಬ್ಬಾ ಎಂದರೆ ಎರಡೊ ಮೂರೋ ಸಾರಿ ಮಾತ್ರ ಬಸ್ ಪ್ರಯಾಣದ ಅವಕಾಶ ಸಿಗುತ್ತಿತ್ತು. ಆದರೆ ಈಗಿದು ನಿತ್ಯಬದುಕಿನ ಲಯದ ಬಹುಮುಖ್ಯ ಭಾಗವಾಗಿದೆ. ಏಕೆಂದರೆ ಎಂದೋ ಒಮ್ಮೆ ನಾವು ಹಾದು ಬರುವ ಅನುಭವಗಳು ನಮಗೆ ಕಾಣಿಸುವ ದರ್ಶನ ಬೇರೆಯಾದರೆ ಅದೇ ಕ್ರಿಯೆ